ಉತ್ತರ ಕರ್ನಾಟಕದ ಭಾಗಗಳಿಗೆ ಅನಾನುಕೂಲವಾಗುತ್ತದೆ. ಆ ಮುದ್ರಣಾಲಯವನ್ನು ಮುಚ್ಚುವಂಥ ವಿಚಾರವಿದ್ದರೆ, ದಯವಿಟ್ಟು ಅದನ್ನು ಮುಚ್ಚಬಾರದು ಎಂದು ತಮ್ಮ ಮೂಲಕ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ,. ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಮತ್ತು ಇವತ್ತು ಈ ವಿಷಯವನ್ನು ಎತ್ತಿದ್ದಾರೆ. ಇದು ಆಡಳಿತಾತ್ಮಕವಾದಂಥ ವಿಚಾರ. ಆದರೂ ಸಹ ನಾಳೆ ಅಥವಾ ನಾಡಿದ್ದು ಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇನೆ.

*(ಐ) ಹುಬ್ಬಳ್ಳಿ-ಧಾರವಾಡ ನಗರಕ್ಕೆ ಆಕ್ಟ್ರಾಯ್ ಗ್ರಾಂಟ್ ಬಿಡುಗಡೆ.*

ಶ್ರೀ ಅಶೋಕಕಾಟ್ವೆ (ಹುಬ್ಬಳ್ಳಿ) :— ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ನಗರಕ್ಕೆ ಕೊಡುವಂಥ ಆಕ್ಟ್ರಾಯ್ ಗ್ರಾಂಟನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಮಾರ್ಚ್ 31ನೇ ತಾರೀಖು ವರ್ಷದ ಕೊನೆಯ ದಿವಸವಾಗಿದ್ದರೂ ನಮಗೆ ಬರುವಂಥ 10 ಕೋಟಿ ರೂಪಾಯಿಗಳ ಆಕ್ಟ್ರಾಯ್ ಗ್ರಾಂಟನ್ನು ರಾಜ್ಯ ಸರ್ಕಾರ ಇನ್ನೂ ಬಿಡುಗಡೆ

*11.40 ಪಿ.ಎಂ.*

ಮಾಡಿಲ್ಲ. ಬೇರೆ ಮಹಾನಗರ ಸಭೆಗಳಿಗೆ ಹಣ ಬಿಡುಗಡೆ ಮಾಡುತ್ತಾರೆ. ಆದರೆ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗಳಿಗೆ ಏಕೆ ಬಿಡುಗಡೆ ಮಾಡುತ್ತಿಲ್ಲವೆನ್ನುವುದನ್ನು ದಯಮಾಡಿ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಆಕ್ಟ್ರಾಯಿ ಗ್ರಾಂಟ್ ಎಂದು ನಾವು ಕೊಡುವುದಿಲ್ಲ. ಡಾ: ತಿಮ್ಮಯ್ಯನವರ ವರದಿ ಬಂದ ಮೇಲೆ ದರ ಪ್ರಕಾರ ಲಂಪ್‌ಸಮ್ ಆಗಿ ಗ್ರಾಂಟ್ ಕೊಡಬೇಕಾಗುತ್ತದೆ. ಅದರಲ್ಲಿ ಆಕ್ಟ್ರಾಯಿ ಗ್ರಾಂಟ್ ಎನ್ನುವುದು ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಧಾರವಾಡ ಹುಬ್ಬಳ್ಳಿ ಮಹಾನಗರ ಸಭೆಗೆ ಯಾವ ರೀತಿಯಲ್ಲಾದರೂ ಮಾನ್ಯ ಉಪ ಮುಖ್ಯಮಂತ್ರಿಗಳು ಹಣ ಕೊಟ್ಟರೆ ಸಾಕು.

ಶ್ರೀ ಅಶೋಕ್ ಕಾಟ್ವೆ :— ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ 24 ಕೋಟಿ ರೂ.ಗಳನ್ನು ಕೊಡಬೇಕಾಗಿತ್ತು ಆದರೆ ಅದರಲ್ಲಿ 15 ಕೋಟಿ ರೂಪಾಯಿಗಳು ಬಂದಿದೆ ಬಾಕಿ ಉಳಿದ 10 ಕೋಟಿ ರೂಪಾಯಿಗಗಳಳು ಇನ್ನೂ ಬಿಡುಗಡೆ ಆಗಿ ಬಂದಿಲ್ಲ.

ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೆ, ಆಕ್ಟ್ರಾಯ್ ಗ್ರಾಂಟ್ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದರೆ ಈಗ ಆಕ್ಟ್ರಾಯಿ ಗ್ರಾಂಟ್ ಎಂದು ಇಲ್ಲವೇ ಇಲ್ಲ. ಹಾಗಾಗಿ ಆಕ್ಟ್ರಾಯಿ ಗ್ರಾಂಟ್ ಎಂದು ಕೊಡುವುದೂ ಇಲ್ಲ.

ಅಧ್ಯಕ್ಷರು :— ಮಾನ್ಯ ಹಣಕಾಸಿನ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ - ಆಕ್ಟ್ರಾಯಿ ಗ್ರಾಂಟ್ ಎನ್ನತಕ್ಕಂಥದ್ದು ಇವತ್ತು ಪದ್ಧತಿಯಲ್ಲಿ ಇಲ್ಲ. ಯಾವ ಗ್ರಾಂಟ್ ಬರಬೇಕಾಗಿತ್ತೋ ಅದು ಬಂದಿಲ್ಲವೆಂದು ಖಚಿತವಾಗಿ ಹೇಳಿದರೆ ಆ ಗ್ರಾಂಟ್ ಕೊಡುವ ಬಗ್ಗೆ ಅವರು ಹೇಳುತ್ತಾರೆ.

ಶ್ಕೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಡಾ: ತಿಮ್ಮಯ್ಯನವರ ವರದಿ ಪ್ರಕಾರ ಪ್ರತಿಯೊಂದು ಮಹಾನಗರಸಭೆಗೆ ಪ್ರತಿ ವರ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡುತ್ತಾರೆ. ಅದರಂತೆ ಕಳೆದ ವರ್ಷ 21 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ನಮ್ಮ ಮಹಾನಗರಸಭೆಗೆ ಬಿಡುಗಡೆ ಮಾಡಿದ್ದರು. ಈ ವರ್ಷ ಲೆಕ್ಕ ಮಾಡಿದ ಪ್ರಕಾರ 24 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಇಲ್ಲಿಯವರೆಗೆ 12 ರಿಂದ 13 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇನ್ನುಳಿದ ಸುಮಾರು 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಅದನ್ನು 31ನೇ ಮಾರ್ಚ್ 1999ರ ಒಳಗಾಗಿ ಬಿಡುಗಡೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೆ ಪ್ರತೀ ತಿಂಗಳು ಸರ್ಕಾರದಿಂದ ಅವರಿಗೆ ಕೊಡತಕ್ಕಂಥದ್ದು ಹನ್ನೆರಡರಲ್ಲಿ ಒಂದು ಭಾಗ ಅಮೌಂಟನ್ನು ಲೋಕಲ್ ಬಾಡೀಸ್ ಮತ್ತು ಪಂಚಾಯತ್ ಸದಸ್ಯರುಗಳಿಗೆ ಕೊಟ್ಟುಬಿಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಗೆ ಏನಾದರೂ ಕೊಡಬೇಕಾಗಿರುವ ಹಣ ಉಳಿದಿದ್ದರೆ ಅದನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

*(ಐ) ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಗೈರುಹಾಜರಿ.*

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲಾ ಉಸ್ತಿವಾರಿ ಮಂತ್ರಿಯವರು ಸದನದಲ್ಲಿ ಕಾಣುತ್ತಿಲ್ಲ. ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ ಎನ್ನುವ ವದಂತಿಯನ್ನು ಪತ್ರಿಕೆಗಳಲ್ಲಿ ನಾವು ಓದಿದ್ದೇವೆ. ಅವರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದಾಗ 'ಅವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ರಜದ ಮೇಲೆ ಹೋಗಿದ್ದಾರೆ' ಎಂದು ಮಾನ್ಯ ಅಧ್ಯಕ್ಷರಾದ ತಾವು ನಮಗೆ ತಿಳಿಸಿದಿರಿ. ಜಿಲ್ಲಾ ಉಸ್ತುವಾರಿ ಮೌತ್ರಿಗಳ ಆರೋಗ್ಯ ವಿಚಾರಣೆ ಮಾಡುವಂಥ ಸಂದರ್ಭದಲ್ಲಿ ಸದನದಲ್ಲಿ ಅವರು ಇಲ್ಲ. ಹಾಸನದಲ್ಲಿ ಅವರ ಮನೆಗೆ ದೂರವಾಣಿ